

ಮಾರ್ಕೆಟ್ಟಿಗೆ ಹೋಗಿದ್ಲು. ನಾನು ಬಂದ್ಬುಟ್ಟು ಗೇಟ್ ಹತ್ತಿರ ನಿಂತ್ಕೊಂಡಿದ್ನ, ನಮ್ಮಮ್ಮ ಬಂದ್ಬುಟ್ಟು ಫೋನ್ ಮಾಡ್ಬಿಟ್ರು. ನಾನು ಬಂದ್ಬುಟ್ಟು ಹಾಗೆ ಮಾತಾಡ್ತಾ ಆ ಕಡೆ ಕಿಟಕಿ ಒಳಗೆ ಇಣುಕಿ ನೋಡಿದ್ನ, ಆಗ ಪಕ್ಕದ ಮನೆಯವರು ಬಂದ್ಬುಟ್ಟು, 'ಯಾರ್ರೀ ನೀವು? ಯಾಕೆ ಕಿಟಕಿ ಒಳಗೆ ಬಗ್ಗಿ ನೋಡ್ತೀರಾ?' ಅಂತ ಜಗಳಕ್ಕೆ ಬಂದ್ಬುಟ್ರು"

## ಸಾಕ್ಷಿಯ 'ನೋ' ಕ್ಯಾಚ್‌ವರ್ಡ್

ನನ್ನ ಬಾಸ್ ಒಬ್ಬರ ಮಾತಿನ ಪ್ರಾರಂಭವು 'ನೋ' ಇಂದ ಆಗುತ್ತಿತ್ತು. ಅದು ಅವರ ಕ್ಯಾಚ್‌ವರ್ಡ್. ಅದರ ಜೊತೆಗೆ ಅರ್ಧ ಮಾತುಗಳನ್ನು ನುಂಗಿಬಿಡುತ್ತಿದ್ದರಿಂದ ಅವರು ಏನು ಹೇಳುತ್ತಾರೆ ಎಂದು ಅನೇಕರಿಗೆ ತಿಳಿಯುತ್ತಿರಲಿಲ್ಲ. ಅವರು ಒಮ್ಮೆ ನ್ಯಾಯಾಲಯದಲ್ಲಿ ತಜ್ಞಸಾಕ್ಷಿಯಾಗಿದ್ದರು. ವಕೀಲರು ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ, ಕೊನೆಗೆ ನ್ಯಾಯಾಧೀಶರಿಗೆ 'ಈ ತಜ್ಞಸಾಕ್ಷಿಯು ನಮ್ಮ ಪ್ರತಿಪಾದನೆಗೆ ಸಂಪೂರ್ಣ ಸಹಮತರಾಗಿದ್ದಾರೆ' ಎಂದರು.

ನ್ಯಾಯಾಧೀಶರು ಸಾಕ್ಷಿಯ ಅರ್ಧ ನುಂಗಿದ ಮಾತುಗಳನ್ನು ಕೇಳಿ, 'ನಾನೇ ಕೇಳುತ್ತೇನೆ' ಎಂದು, ಸಾಕ್ಷಿಯ ಕಡೆ ತಿರುಗಿ 'ಈ ವಕೀಲರ ಪ್ರತಿಪಾದನೆಯನ್ನು ಸಂಪೂರ್ಣವಾಗಿ ನೀವು ಒಪ್ಪುತ್ತೀರಾ?' ಎಂದು ಕೇಳಿದರು.

ತಜ್ಞಸಾಕ್ಷಿಯು 'ನೋ ಸರ್' ಎಂದು ಮಾತನ್ನು ಪ್ರಾರಂಭಿಸಿದರು.

ನ್ಯಾಯಾಧೀಶರು ವಕೀಲರಿಗೆ 'ಏನ್ರೀ ಇದು, ಸಾಕ್ಷಿ 'ನೋ, ನೋ' ಅಂತ ಹೇಳ್ತಿದ್ದಾರೆ. ನೀವು ಅವರ ಹೇಳಿಕೆಯನ್ನು ತಿರುಚುತ್ತ ಇದ್ದೀರಾ?' ಅಂತ ಕೋಪದಿಂದ ಕೇಳಿದರು.

ವಕೀಲರು ಬೆವರನ್ನು ಒರೆಸಿಕೊಳ್ಳುತ್ತಾ ಇವರತ್ತ ನೋಡಿದರು.

ಸಾಕ್ಷಿಯು ಬೆಚ್ಚಿಬಿದ್ದು 'ನೋ ಸರ್, ನಾನು ಸಹಮತನಾಗಿದ್ದೇನೆ' ಎಂದರು.

ನ್ಯಾಯಾಧೀಶರಿಗೆ ಸಾಕ್ಷಿಯ 'ನೋ' ಒಂದು ಕ್ಯಾಚ್‌ವರ್ಡ್ ಎಂದು ತಿಳಿಯಿತು. ಅವರು ನಗುತ್ತ, 'ಓ, **NO** ಅಲ್ಲ **KNOW**, ಅವರ ತಜ್ಞ ಹೇಳಿಕೆಯನ್ನು ಬರಹರೂಪದಲ್ಲಿ ಪಡೆದು ದಾಖಲಿಸಿ' ಎಂದು ಆಜ್ಞೆ ಮಾಡಿದರು.

## 'ಎಲ್ಲೋ ಒಂದು ಕಡೆ'ಯಲ್ಲಿ...

ರಿಯಾಲಿಟಿ ಶೋಗಳಲ್ಲಿ ಭಾಗವಹಿಸುವ ಸ್ಪರ್ಧಿಗಳು ಸ್ವಲ್ಪದಿನಗಳ ಅನಂತರ ಒಂದು ರೀತಿಯ 'ನಾ ಸಮಾನಮೇವರು' ಮೋಡಿಗೆ (ಇಂಗ್ಲಿಷ್ ಮೋಡ್ ಅಥವಾ ಕನ್ನಡದ ಮೋಡಿ ಯಾವುದಾದರು ಚಿಂತೆಯಿಲ್ಲ) ಸಿಲುಕಿಬಿಡುತ್ತಾರೆ. ಆಗ ಅವರಿಗೆ ವರವಾಗಿ ದತ್ತವಾಗುವ ಸೆಳೆನುಡಿ ಒಂದಿದೆ. ಹಾಗೆ ಉದುರುವ ಅಣಿಮುತ್ತು 'ಎಲ್ಲೋ ಒಂದು ಕಡೆ!' ಇದನ್ನು ಪ್ರಯೋಗಿಸಲು ಪ್ರಾರಂಭಿಸುವ ಸ್ಪರ್ಧಿಯು 'ಎಲ್ಲೋ ಒಂದು ಕಡೆ' ಇತರ ಸ್ಪರ್ಧಿಗಳಿಗಿಂತ ತಾನು ಹೆಚ್ಚು ಎಂದುಕೊಳ್ಳಲು ಪ್ರಾರಂಭಿಸಿಬಿಟ್ಟಿರುತ್ತಾರೆ:

'ಅವರು ಹೇಳುವುದನ್ನು ಕೇಳಿದರೆ ಎಲ್ಲೋ ಒಂದು ಕಡೆ ಅವರಿಗೆ ಸ್ಪಷ್ಟತೆ ಇಲ್ಲ ಅನ್ನಿಸುತ್ತದೆ. ಅಲ್ಲದೆ ಎಲ್ಲೋ ಒಂದು ಕಡೆ ನಾನು ಮಾಡಿದ್ದನ್ನು ತಪ್ಪು ಅಂತ ಸಾಧಿಸಲು ಹೋಗ್ತಿದಾರೆ ಅನ್ನಿಸುತ್ತದೆ. ಅವರಿಗೆ ಎಲ್ಲೋ ಒಂದು ಕಡೆ ತಾವು ಪರ್ಫಾಮ್ ಮಾಡಲು ಆಗ್ತಾ ಇಲ್ಲ ಅನ್ನೋ ಗಿಲ್ಟು ಕಾಡ್ತಾ ಇದೆ ಅನ್ನಿಸುತ್ತೆ'.

ಅದು ಯಾವ ಒಂದು ಕಡೆ ಅನ್ನುವುದು ನಮಗೆ ಖಂಡಿತ ತಿಳಿಯುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ಅವರ ಮಾತಿಗೆ ಅರ್ಥವೇ ಇಲ್ಲ ಅನ್ನಿಸಲು ಪ್ರಾರಂಭವಾದರೆ ಅದರಲ್ಲಿ ತಪ್ಪೇನು ಇಲ್ಲ!

ಎಲ್ಲಕ್ಕಿಂತ ಮುಖ್ಯವಾಗಿ ಈ 'ಎಲ್ಲೋ ಒಂದು ಕಡೆ' ಸೆಳೆನುಡಿಯು ಒಂದು ರೀತಿಯ ಅಂಟುರೋಗವಾಗಿ ಎಲ್ಲಾ ಸ್ಪರ್ಧಿಗಳನ್ನು ಆವರಿಸಿಕೊಂಡು ಬಿಡುತ್ತದೆ. ಮುಂದಿನ ಬಾರಿ ನೀವು ಗಮನವಿಟ್ಟು ನೋಡಿ. ಎಲ್ಲೋ ಒಂದು ಕಡೆ ನಾನು ಹೇಳುತ್ತಿರುವುದು ಸರಿ ಎಂದು ಖಂಡಿತ ನಿಮಗೆ ಅನ್ನಿಸುತ್ತದೆ.

ಇಲ್ಲಿಗೆ ನನ್ನ ಈ ಇದು ಇದಾಯಿತು ಅಂತ ತಿಳಿಸಲು ನನಗೆ ತುಂಬಾ ಇದಾಗ್ತಾ ಇದೆ.

ಪ್ರತಿಕ್ರಿಯಿಸಿ: **feedback@sudha.co.in**